ದಿನಾಂಕಃ 28-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**1 ನೇ ಎದುರುದಾರರ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಾದ ಶ್ರೀಮತಿ. ಹೆಚ್.ಹೆಚ್.ಕೆ ಇವರಿಂದ.**

ಆರ್.ಟಿ.ಸಿ ಆನಲೈನ ಪ್ರತಿ ನಿಆರ್-1 ಅಂತಾ, ಮ್ಯೂಟೇಶನ್ ಪ್ರತಿಯನ್ನು ನಿಆರ್-2 ಅಂತಾ, ಉಪವಿಭಾಗಾಧಿಕಾರಿ ಆದೇಶ ದಿನಾಂಕಃ 02.08.2024 ರ ಪ್ರತಿಯನ್ನು ನಿಆರ್-3 ಅಂತಾ, ಕಲಂ 63 ರ ಭಾರತೀಯ ಸಾಕ್ಷ್ಯ ಅಧಿನಿಯಮ ಪ್ರಮಾಣಪತ್ರವನ್ನು ನಿಆರ್-4 ಅಂತಾ ಗುರುತಿಸಲಾಯಿತು.

ಆದ್ದರಿಂದ ನಾನು ಕೇಳಿದಂತೆ ಪರಿಹಾರ ನೀಡಲು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀ. ಎನ್.ಡಿ.ಸಿ ಇವರಿಂದ.**

4(1) ಹಾಗೂ 12(2) ನೊಟೀಸು ನಮಗೆ ತಲುಪಿರುತ್ತವೆ. ಸರ್ಕಾರದವರು ಹಣ ಪಡೆದುಕೊಳ್ಳಲು ನೊಟೀಸು ನೀಡಿದ್ದರೂ ಸಹಿತ ನಾನು ಹಾಗೂ 2 ನೇ ಎದುರುದಾರರು ತಕರಾರು ಮಾಡಿಕೊಂಡಿರುವುದರಿಂದ ಹಣ ಪಡೆದುಕೊಂಡಿರುವುದಿಲ್ಲ. ಈಗ ನಾವು ಸದರಿ ಹಣವನ್ನು ನಾನು ಮತ್ತು 2 ನೇ ಎದುರುದಾರ ಸಮನಾಗಿ ಹಂಚಿಕೊಳ್ಳಲು ಸಿದ್ದನಿದ್ದೇವೆ.

ನಾನು ಹಾಗೂ 2 ನೇ ಎದುರುದಾರರು ಸದರಿ ಹಣವನ್ನು ಪಡೆದುಕೊಳ್ಳಲು ಹೋಗದೇ ಇರುವುದರಿಂದ ವಿವಾದಾತ್ಮಕ ಪರಿಹಾರ ಎಂದು ನ್ಯಾಯಾಲಯಕ್ಕೆ ಕಳುಹಿಸಿದ್ದಾರೆ. ಅದರಲ್ಲಿ ಅರ್ಜಿದಾರರ ತಪ್ಪು ಇರಲಿಲ್ಲ. ಅರ್ಜಿದಾರರು ಯಾವುದೇ ಬಡ್ಡಿ ನೀಡಲು ಭಾಧ್ಯಸ್ಥರಲ್ಲ ಎನ್ನುವುದು ಸರಿಯಲ್ಲ. ಸದರಿ ಪರಿಹಾರದ ಹಣದ ಕುರಿತು ಯಾರಾದರೂ ಕ್ಲೇಮ ಮಾಡಿದಲ್ಲಿ ನಾನು ಹಾಗೂ 2 ನೇ ಎದುರುದಾರರು ಸದರಿ ಹಣವನ್ನು ಮರಳಿ ತುಂಬುತ್ತೇನೆ ಎಂದು ಇಂಡಿಮ್ನಿಟಿ ಬಾಂಡ ಬರೆದುಕೊಡಲು ಸಿದ್ಧನಿದ್ದೇನೆ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

28-02-2026
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.